ಕಾವ್ಯವಾಗಿದೆ. ಇಂಥ ಸೃಜನಶೀಲ ಗುಣ ವಿಶೇಷದ ನಡುವೆ ಬೆಳೆದ ಮಕ್ಕಳಿಗೆ ಭಾಷೆ ಎಂಬುದು ಕೇವಲ ಕಲಿಕೆಯ ಭಾಗವಾಗುವುದಿಲ್ಲ, ಅದು ಬದುಕಿನ ಅವಿಭಾಜ್ಯ ಅಂಗವಾಗಿ ವ್ಯಕ್ತಿತ್ವದ ಅಸ್ಮಿತೆಯಾಗುತ್ತದೆ. ಬುದ್ಧಿಭಾವಗಳ ವಿದ್ಯುದಾಲಿಂಗನ ಶಕ್ತಿಯಾಗುತ್ತದೆ. ಯಾವುದೇ ಭಾಷೆಯ ನುಡಿಗಟ್ಟುಗಳಿಗೆ ಈ ಪರಿಯ ಶಕ್ತಿ ಇರುತ್ತದೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದ ಮಗುವಿಗೆ ಈ ಸೃಜನಶೀಲತೆ ನಿಸರ್ಗ ಸಹಜ ನಡೆಯಾಗಿ ಒಲಿದಿರುತ್ತದೆ. ವಚನಕಾರರು ಇಂಥ ಕಾಯಕ ಮೂಲದ ಜಾನಪದೀಯ ಅನುಭವ ಶಿಕ್ಷಣದಲ್ಲಿ ಬೆಳೆದವರಾದ್ದರಿಂದಲೇ ಅವರ ವಚನಗಳು ಆಯಾ ವಚನಕಾರನ ವ್ಯಕ್ತಿತ್ವದ ಅಸ್ಮಿತೆಗಳಾಗಿವೆ. ಅವರು ಕಾಯಕ ಜೀವಿಗಳಾಗಿದ್ದರಿಂದಲೇ ಅವರ ವಚನಗಳಲ್ಲಿ ಕಾಯಕ ಪರಿಭಾಷೆಗೆ ಬುದ್ಧಿಭಾವಗಳ ವಿದ್ಯುದಾಲಿಂಗನ ಶಕ್ತಿ ದತ್ತವಾಗಿದೆ; ಅದು ಸೃಜನಶೀಲವಾಗಿದೆ.

ಇತ್ತೀಚಿನ ದಿನಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಡೆಗಣಿಸುತ್ತಿರುವ ರೀತಿಯನ್ನು ನೋಡಿದರೆ ಸಂಕಟವಾಗುತ್ತದೆ. ಮಕ್ಕಳಿಗೆ ಪರಿಸರ ಭಾಷೆಯಲ್ಲಿ ಶಿಕ್ಷಣ ನೀಡದೆ, ಪರಿಸರಕ್ಕೆ ಅನ್ಯವೆನ್ನಿಸಿದ ಭಾಷೆಯ ಶಿಕ್ಷಣ ಮಾಧ್ಯಮವಾಗಿಸಿಕೊಂಡು ಶಿಕ್ಷಣವನ್ನು ಒಂದು ವ್ಯಾಪಾರದ ದಂಧೆಯಾಗಿಸುತ್ತಿರುವುದು ಇಡೀ ಮಕ್ಕಳ ಮನಸ್ಸನ್ನು ಸೃಜನಶೀಲತೆಯಿಂದ ಹೊರಗಿಡುವ ಪ್ರಕ್ರಿಯೆಯೇ ಆಗಿದೆ. ನೀರಿನಿಂದ ಮೀನನ್ನು ಹೊರಗೆ ತೆಗೆದರೆ ಹೇಗಾಗುತ್ತದೋ ಹಾಗೆ ಪರಿಸರದಿಂದ ಪ್ರತ್ಯೇಕಿಸಿದ ಮನಸ್ಸು ಪರಿಸರವನ್ನು ಅರಿಯಲಾರದ ಮಾಹಿತಿ ಮೂಟೆಗಳಾಗುತ್ತವೆ. ಸೃಜನಶೀಲ ಗುಣಸ್ಪಂದನವನ್ನು ಮುರುಟಿಸಿಕೊಂಡ ಕುಬ್ಜತ್ವದಲ್ಲಿ ನರಳುತ್ತವೆ. ಇದನ್ನೇ ಕುವೆಂಪು 'ಕಲ್ಲಕುಂಡದಿ ಬೆಳೆದ ಅಶ್ವತ್ಥ ಸಸಿಯಂತೆ ಕಿಮುಳ್ಚಿ ಗುಜ್ಜಾಗುತ್ತಿದೆ ಮೊಳೆವ ಚೈತನ್ಯ' ಎಂದು ಕರೆದರು. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ಸದಾ ಮಳೆಯಲ್ಲಿ ಮಿಂದೇಳುವ ಇಂಗ್ಲೆಂಡಿನಲ್ಲಿ ಮಳೆ ನಿಂತು ಬಿಸಿಲು ಬಿದ್ದರೆ ಸಾಕು ಎಂಬ ತಹತಹವಿರುತ್ತದೆ. ಮನೆಯೊಳಗೆ ಬಂದಿಯಾಗಿರುವ ಎಲ್ಲ ಮನಸ್ಸುಗಳಿಗೂ ಮಳೆ ನಿಂತರೆ ಅದು ಬಿಡುಗಡೆಯ ಉಲ್ಲಾಸದ ಉತ್ಸಾಹದ ಸಂಭ್ರಮ ದಿನ. ಇಂಥ ವಾತಾವರಣದಲ್ಲಿ ಬೆಳೆದ ಮನಸ್ಸು ಸಹಜವಾಗಿ ಮಕ್ಕಳನ್ನು ಕುರಿತು ಪದ್ಯ ಬರೆಯುವಾಗ–

**Rain Rain go away**

**Johnny wants to play**

ಎಂದು ಮೊರೆಯಿಡುತ್ತದೆ. ಇದು ಮಕ್ಕಳ ಹಂಬಲವಾಗಿಯೂ ಮೊರೆದಿದೆ. ಇಂಥ ಮಳೆನಾಡಿನ ಪದವನ್ನು ತಂದು ಸದಾ ಬಿಸಿಲು ಸುರಿಯುವ ಬೆಂಗಾಡಿನ ಮಕ್ಕಳ ಕಲಿಕೆಯ ಪಾಠವಾಗಿ ಕಂಠಪಾಠ ಮಾಡಿಸಿದರೆ ಏನನ್ನೋಣ? ಇದು ನೆಲಮೂಲದ ಶಿಕ್ಷಣಕ್ಕೂ ಅನ್ಯಭಾಷಿಕ ನೆಲೆಮೂಲದ ಸಂವೇದನೆಗೂ ಇರುವ ವ್ಯತ್ಯಾಸ. ಆದ್ದರಿಂದಲೇ ಮಳೆಗಾಗಿ ಹಂಬಲಿಸುವ ಬೆಂಗಾಡಿನ ಬಯಲು ಸೀಮೆಯ ಮಕ್ಕಳ ಬಾಯಲ್ಲಿ ಜನಪದ ಮನೋಧರ್ಮ–

ಹುಯ್ಯೋ ಹುಯ್ಯೋ ಮಳೆರಾಯ  
ಹೂವಿನ ತೋಟಕೆ ನೀರಿಲ್ಲ  
ಬಾರೋ ಬಾರೋ ಮಳೆರಾಯ  
ಬಾಳೆಯ ತೋಟಕೆ ನೀರಿಲ್ಲ  
ಚಚ್ಚೋ ಚಚ್ಚೋ ಮಳೆರಾಯ  
ಚೊಗಚೆ ಗಿಡಕೆ ನೀರಿಲ್ಲ

ಎಂದು ಮಳೆಗೆ ಹಂಬಲಿಸಿ ಕರೆಯುತ್ತದೆ, ಮೊರೆಯುತ್ತದೆ. ಇಂಥ ಪರಿಸರ ಪ್ರಜ್ಞೆ ಮಕ್ಕಳ ಕಣ್ಣು ಕಿವಿ ನೆನಪುಗಳನ್ನು ಕೆಡದಂತೆ, ಅವರನ್ನು ಮಹಾಮಾನವೀಯ ಸಂವೇದನಾಶೀಲರನ್ನಾಗಿ ಬೆಳೆಸುತ್ತದೆ. ಕೇವಲ ಮನುಷ್ಯಕೇಂದ್ರಿತ ನೆಲೆಯಲ್ಲಿ ಬದುಕನ್ನು ರೂಪಿಸಿಕೊಳ್ಳುವುದಕ್ಕಿಂತ ಜೀವಕೇಂದ್ರಿತ ನಿಸರ್ಗಧರ್ಮದ ನಡೆಯಲ್ಲಿ ಬದುಕನ್ನು ರೂಪಿಸುತ್ತದೆ.

ಮಕ್ಕಳ ಸಾಹಿತ್ಯವನ್ನು ರಚಿಸುವ ಪ್ರತಿಯೊಬ್ಬ ಸಾಹಿತಿಗೂ ಈ ಬಗೆಯ ತಿಳಿವಳಿಕೆಯ ಅಗತ್ಯವಿದೆ. ಮಕ್ಕಳು ಮುಂದಿನ ಪ್ರಜೆಗಳು ಎಂಬ ಭವಿಷ್ಯದ ಜವಾಬ್ದಾರಿ ಹೊತ್ತವರಾಗಿ ವಯೋಧರ್ಮದ ಮನೋವಿಕಾಸಕ್ಕೆ ಅನುಗುಣವಾಗಿ ಪದ್ಯ–ಗದ್ಯಗಳ ರಚನೆ ಇಂದಿನ ಅಗತ್ಯವಾಗಿದೆ. ಎಂದಿನ ಅಗತ್ಯವೂ ಆಗಿದೆ.

●